ಒಣಭೂಮಿ ಅಭಿವೃದ್ಧಿ ಮಂಡಳಿ.

2792: (3849)

ಶ್ರೀ ಪಿ.ಹೆಚ್.ಪೂಜಾರ್ (ಬಾಗಲಕೋಟೆ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಒಣಭೂಮಿ ಅಭಿವೃದ್ಧಿ ಮಂಡಳಿಯವರು ನಕಲಿ ಕಂಪನಿಗಳ ಹೆಸರಿನಲ್ಲಿ ನಕಲಿ ಬಿಲ್ಲುಗಳನ್ನು ಸೃಷ್ಟಿಸಿ ಕೋಟ್ಯಾಂತರ ರೂಪಾಯಿ ಹಣವನ್ನು ಲೂಟಿ ಮಾಡಿರುವ ಪ್ರಕರಣ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದಲ್ಲಿ ರಾಜ್ಯದಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಈ ಪ್ರಕರಣಗಳು ನಡೆದಿವೆ, ವಿವರ ನೀಡುವುದು.

ಇ) ಎಷ್ಟು ಪ್ರಮಾಣದ ಅವ್ಯವಹಾರ ನಡೆದಿದೆ ವಿವರ ನೀಡುವುದು.

ಈ) ತಪ್ಪಿತಸ್ಥರ ವಿರುದ್ಧ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):

ಅ) ಒಣ ಭೂಮಿ ಅಭಿವೃದ್ಧಿ ಮಂಡಳಿಯಲ್ಲಿ ಕಂಪನಿಗಳಲ್ಲಿ ವ್ಯವಹರಿಸುವಂಥ ಕಾರ್ಯಕ್ರಮಗಳೇನು ಇಲ್ಲದಿರುವುದರಿಂದ ಅಂತಹ ಯಾವ ಅವ್ಯವಹಾರಗಳು ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಉಡುಪಿ ಜಿಲ್ಲೆಯಲ್ಲಿ ಪ್ರಕೃತಿ ವಿಕೋಪದಿಂದ ಆದ ನಷ್ಟ ಮತ್ತು ಪರಿಹಾರ

2799: (3791)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಲ್ಲಿ ಪ್ರಕೃತಿ ವಿಕೋಪದಿಂದ ಆದ ಹಾನಿ ಎಷ್ಟು?

ಆ) ವಿತರಿಸಲಾದ ಪರಿಹಾರ ಎಷ್ಟು? (ಪ್ರಕರಣವಾರು ವಿವರಣೆ ತಿಳಿಸುವುದು)

ಇ) ಇನ್ನೂ ಕೊಡಬೇಕಾದ ಪರಿಹಾರ ಎಷ್ಟು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ಉಡುಪಿ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಲ್ಲಿ ಪ್ರಕೃತಿ ವಿಕೋಪದಿಂದ ಸುಮಾರು ರೂ. 1432.29 ಲಕ್ಷಗಳ ಹಾನಿ ಸಂಭವಿಸಿರುವುದಾಗಿ ಅಂದಾಜಿಸಲಾಗಿದೆ.

ಆ) ರೂ. 75.87 ಲಕ್ಷಗಳನ್ನು ಈ ಬಾಬ್ತಿಗಾಗಿ ವಿತರಿಸಿದ್ದು, ವಿವರ ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

		ಸಂಖ್ಯೆ	ಮೊತ್ತ
1)	ಮಾನವ ಜೀವ ಹಾನಿ	16	14.00
2)	ಜಾನುವಾರ ಹಾನಿ	10	0.23
3)	ನೀರಾವರಿ ಬಾವಿ	1	0.01
4)	ಪಂಪುಸೆಟ್ ಮತ್ತು ಪಂಪ್‌ಶೆಡ್ ಹಾನಿ	1	0.03
5)	ವಾಸದ ಮನೆ ಭಾಗಶಃ ಹಾನಿ	295	3.35
6)	ಸಂಪೂರ್ಣ ಹಾನಿ	27	1.01
7)	ಬೆಂಕಿಯಿಂದ ವಾಸದ ಮನೆ ಪೂರ್ಣ ಹಾನಿ	27	1.57
8)	ಭಾಗಶಃ ಹಾನಿ	8	0.23
9)	ಜಾನುವಾರು ಕೊಟ್ಟಿಗೆ ಮತ್ತು ಇತರೆ ಹಾನಿ	57	1.06
10)	ತೋಟಗಾರಿಕೆ ಬೆಳೆ ಹಾನಿ	6	0.05
11)	ಕೃಷಿ ಬೆಳೆ ಹಾನಿ	-	13.00

12) ಸಾರ್ವಜನಿಕ ಕಟ್ಟಡ ಹಾಗೂ ರಸ್ತೆ ದುರಸ್ತಿ ಬಗ್ಗೆ	-	40.83
ಒಟ್ಟು	447	75.87

ಇ) ರೂ.87.63 ಲಕ್ಷ ಪರಿಹಾರ ನೀಡಲು ಬಾಕಿ ಇದ್ದು, ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಜಯನಗರ ಬಸ್ ನಿಲ್ದಾಣದಲ್ಲಿ ಬಹುಮಹಡಿ ಕಟ್ಟಡ ನಿರ್ಮಾಣ.

2802: (3750)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಯನಗರ ಬಸ್ ನಿಲ್ದಾಣದ ಕಟ್ಟಡ ಹಳೆಯದಾಗಿದ್ದು, ಹೆಚ್ಚಿನ ಸ್ಥಳಾವಕಾಶವಿಲ್ಲದೆ ಇರುವುದರಿಂದ ಇದನ್ನು ಒಡೆದು ಹೊಸದಾಗಿ ಬಹುಮಹಡಿ ಕಟ್ಟಡ ನಿರ್ಮಿಸಲು ಸರ್ಕಾರ ಆಲೋಚಿಸಿದೆಯೇ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಇಲ್ಲಾ

ಗುಳ್ಳೇದ ಗುಡ್ಡ ಕ್ಷೇತ್ರದಲ್ಲಿ ಅತಿವೃಷ್ಟಿಯಿಂದ ಆಗಿರುವ ಬೆಳೆಹಾನಿ

2806: (3754)

ಶ್ರೀ ರಾಜಶೇಖರ ವಿ.ಶೀಲವಂತ (ಗುಳ್ಳೇದಗುಡ್ಡ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳ್ಳೆದ ಗುಡ್ಡ ಮತಕ್ಷೇತ್ರದಲ್ಲಿ ಕಳೆದ ಮೂರು ತಿಂಗಳುಗಳಲ್ಲಿ ಅತಿವೃಷ್ಟಿಯಿಂದ ಆಗಿರುವ ಬೆಳೆ ಹಾನಿ ಎಷ್ಟು?

ಆ) ಬೆಳೆಯನ್ನು ಕಳೆದುಕೊಂಡ ರೈತನ ಕುಟುಂಬಕ್ಕೆ ಪರಿಹಾರ ಧನ ನೀಡುವ ಉದ್ದೇಶ ಸರ್ಕಾರಕ್ಕಿದಯೇ?